ಬಿಜಾಪುರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸುವುದು.

2249 (3391) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) :— ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಿಜಾಪುರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದಲ್ಲಿ ಈ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಯಿತು? ಅದಕ್ಕಾಗಿ ತಯಾರಿಸಲಾದ ಅಂದಾಜು ವೆಚ್ಚವೆಷ್ಟು?

ಇ) ಈ ವೆಚ್ಚವನ್ನು ಯಾವ ಯಾವ ಮೂಲದಿಂದ ಪಡೆಯಲಾಗಿದೆ?

ಈ) ಇದಕ್ಕಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಆರ್ಥಿಕ ನೆರವು ನೀಡಿದೆಯೇ?

ಉ) ಕಾಮಗಾರಿಯು ಈಗ ಯಾವ ಹಂತದಲ್ಲಿದೆ? ಕಾಮಗಾರಿಯು ಅರ್ಧಕ್ಕೆ ನಿಂತಿದಲ್ಲಿ ಕಾರಣಗಳೇನು?

ಊ) ಮುಂದೆ ಯಾವಾಗ ಈ ನಿರ್ಮಾಣದ ಕೆಲಸ ಕೈಗೆತ್ತಿಕೊಳ್ಳಲಾಗುವುದು? ಎಂದು ಈ ಒಳಾಂಗಣ ಕ್ರೀಡಾಂಗಣವನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವೆಗಳು ಮತ್ತು ಕ್ರೀಡಾ ರಾಜ್ಯ ಸಚಿವರು) :—

ಅ) ಹೌದು

ಆ) ಈ ಕಾರ್ಯವನ್ನು 1996-97ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ಇದರ ಅಂದಾಜು ವೆಚ್ಚ ರೂ. 82.00 ಲಕ್ಷಗಳು

ಇ) ಈ ವೆಚ್ಚವನ್ನು ಈ ಕೆಳಕಂಡ ಮೂಲಗಳಿಂದ ಪಡೆಯಲಾಗಿದೆ.

1)	ರಣಜಿ ಪಂದ್ಯಾವಳಿ ನಡೆಸಿ ಉಳಿತಾಯಗೊಂಡ ಹಣ	ರೂ. 22.00 ಲಕ್ಷಗಳು
2)	ಬಿಜಾಪುರ ಲೋಕಸಭಾ ಸದಸ್ಯರ ಫಂಡ್‌ನಿಂದ	ರೂ. 5.00 ಲಕ್ಷಗಳು
3)	ಬಾಲಗಕೋಟೆ ಲೋಕಸಭಾ ಸದಸ್ಯರ ಫಂಡ್‌ನಿಂದ	ರೂ. 3.00 ಲಕ್ಷಗಳು
	ಒಟ್ಟು ಸಂಗ್ರಹಿಸಲಾದ ಹಣ	ರೂ. 30.00 ಲಕ್ಷಗಳು

ಕೇಂದ್ರ ಸರ್ಕಾರದಿಂದ ತಾತ್ವಿಕ ಒಪ್ಪಿಗೆ ನೀಡಿರುವ ರೂ. 45.00 ಲಕ್ಷಗಳು ಹಾಗೂ ಉಳಿದ ಮೊತ್ತವನ್ನು ಸಾರ್ವಜನಿಕ ವಂತಿಕೆ ಮೂಲಕ ಸಂಗ್ರಹಿಸಲು ಉದ್ದೇಶಿಸಿದೆ.

ಈ) ಇದಕ್ಕಾಗಿ ರಾಜ್ಯ ಸರ್ಕಾರ ಆರ್ಥಿಕ ನೆರವು ನೀಡಿರುವುದಿಲ್ಲ. ಕೇಂದ್ರ ಸರ್ಕಾರದ ಅನುದಾನ ರೂ. 45.00 ಲಕ್ಷಗಳನ್ನು ನಿರೀಕ್ಷಿಸಲಾಗಿದೆ.

ಉ) ಕಾಮಗಾರಿಯು ಪ್ರಾವಣಿ ಹಂತದಲ್ಲಿದೆ, ಕೇಂದ್ರ ಸರ್ಕಾರದ ಅನುದಾನ ಈ ವರೆಗೂ ಬಿಡುಗಡೆಯಾಗದೇ ಇರುವುದರಿಂದ ಹಾಗೂ ಸಾರ್ವಜನಿಕ ವಂತಿಕೆ ಪಡೆಯದೆ ಇರುವುದರಿಂದ ಕಾಮಗಾರಿ ನಿಂತಿದೆ.

ಊ) ನಿರೀಕ್ಷಿತ ಮೂಲಗಳಿಂದ ಹಣ ಪಡೆದ ನಂತರ ಕ್ರೀಡಾಂಗಣವನ್ನು ಪೂರ್ಣಗೊಳಿಸಲು ಸಾಧ್ಯವಾಗುವುದು.

ಬಿಜಾಪುರ ನಗರದಲ್ಲಿ ಅಂತರ್‌ರಾಷ್ಟ್ರೀಯ ಗುಣಮಟ್ಟದ ಈಜುಕೊಳ ನಿರ್ಮಾಣ.

2250(3392) ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಿಜಾಪುರ ನಗರದಲ್ಲಿ ಅಂತರಾಷ್ಟ್ರೀಯ ಗುಣಮಟ್ಟ ಹೊಂದಿರುವ ಈಜುಕೊಳ ಇದೆಯೇ?

ಆ) ಇಲ್ಲದಿದ್ದರೆ ಅಂತರಾಷ್ಟ್ರೀಯ ಗುಣಮಟ್ಟದ ಈಜುಕೊಳವನ್ನು ನಿರ್ಮಿಸಲು ಸರ್ಕಾರವೇನಾದರೂ ಇಚ್ಛಿಸುವುದೇ?

ಇ) ಹಾಗಿದ್ದಲ್ಲಿ, ಇದಕ್ಕಾಗಿ ಕಾಲಮಿತಿಯೆನ್ನೆನಾದರೂ ಹಾಕಿಕೊಳ್ಳಲಾಗುವುದೇ?

ಈ) ಇದನ್ನು ನಿರ್ಮಿಸಲು ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :—

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ.